( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.272/2015

ದಿನಾಂಕಃ 27-02-2024, ಪಿ ಡಬ್ಲ್ಯೂ–1

ಮುಂದುವರೆದ ಪಾಟೀ ಸವಾಲು ಃ ಶ್ರೀ ಆರ್ ಸಿ ವಕೀಲರಿಂದಃ

ದಾವಾ ಸರ್ವೆ ನಂಬರ್ ಜಮೀನಿನಲ್ಲಿ 19 ಗುಂಟೆ ಜಮೀನನ್ನು ನಾನು ಕ್ರಯದ ಕರಾರು ಪತ್ರದ ರೀತ್ಯಾ ಕ್ರಯ ಪತ್ರವನ್ನು ಬರೆದುಕೊಡುವಂತೆ1 ನೇ ಪ್ರತಿವಾದಿ ನನ್ನನ್ನು ಕೇಳಿದ್ದರು ಎಂದರೆ ನಾನು ಯಾವುದೇ ಕ್ರಯದ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ . ದಿಃ29-05-1995 ರಲ್ಲಿ ಕ್ರಯದ ಕರಾರು ಪತ್ರವನ್ನು ಬರೆದುಕೊಡುವಾಗ ನನ್ನ ತಮ್ಮ ಬೊಮ್ಮಯ್ಯ ರವರು ಬದುಕಿದ್ದರು ಎಂದರೆ ಸಾಕ್ಷಿಯು ನಾನು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಾನು ಬರೆದುಕೊಟ್ಟಿದ್ದ ಕ್ರಯದ ಕರಾರು ಪತ್ರದ ರೀತ್ಯಾ19 ಗುಂಟೆ ಜಮೀನನ್ನು ಬಿಟ್ಟುಕೊಡಿ ಎಂದು ನಾನು ಪ್ರತಿವಾದಿಯರನ್ನು ಕೇಳಿದ್ದೆ ಎಂದರೆ ಸರಿಯಲ್ಲ.

ನಾನು ಈ ದಾವೆಯನ್ನು ಹೂಡಿದ ನಂತರ ನ್ಯಾಯಾಲಯದಿಂದ ಏಕಪಕ್ಷೀಯ ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶ ಪಡೆದು ಪ್ರತಿವಾದಿಯರಿಂದ ದಾವಾ ಸರ್ವೆ ನಂಬರ್ ಜಮೀನಿನ 19 ಗುಂಟೆ ಜಮೀನಿನ ಸ್ವಾಧೀನ ಬಿಡಿಸಿಕೊಡಿ ಎಂದು ನಾನು ಪೋಲೀಸ್ ಠಾಣೆಗೆ ದೂರು ನೀಡಿದ್ದೆ ಎಂದರೆ ಸಾಕ್ಷಿಯು ದೂರು ನೀಡಿರಬಹುದು ಎಂದು ನುಡಿಯುತ್ತಾರೆ, ಮುಂದುವರೆದು ಪ್ರತಿವಾದಿಯರು ದಾವಾ ಆಸ್ತಿಗೆ ತಂಟೆ ತಕಾರಾರು ಮಾಡಿರುತ್ತಾರೆ ಆದ್ದರಿಂದ ದೂರು ನೀಡಿರಬಹುದು ಎಂದು ನುಡಿಯುತ್ತಾರೆ. ದೂರು ನೀಡಿದ ನಂತರ ಪೋಲೀಸರು ನನ್ನನ್ನು ಮತ್ತು 1 ನೇ ಪ್ರತಿವಾದಿಯನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಆಗ ನಾನು ಪ್ರತಿವಾದಿಯರಿಗೆ ಬರೆದುಕೊಟ್ಟ ಕ್ರಯದ ಕರಾರು ಪತ್ರ ಹಾಗೂ ಪಹಣಿ ಪತ್ರಿಕೆಗಳನ್ನು ಪೋಲೀಸರಿಗೆ ಕೊಟ್ಟೆ ಎಂದರೆ ಸಾಕ್ಷಿಯು ಪಹಣಿ ಪತ್ರಿಕೆಗಳನ್ನು ಮಾತ್ರ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ನಂತರ ಪೋಲೀಸರು ಕೊತ್ತಲು ಗಣಪತಿ ದೇವಸ್ಥಾನದಲ್ಲಿ ಬಗೆಹರಿಸಿಕೊಳ್ಳುವಂತೆ ನನಗೆ ಪೋಲೀಸರು ಹೇಳಿದ್ದರು ಎಂದರೆ ಸರಿ, ಸಾಕ್ಷಿಯು ಮುಂದುವರೆದು ಪಂಚಾಯತಿ ನಡೆಯುತ್ತಿದ್ದು ನಾನು ಪಹಣಿ ಪತ್ರಿಕೆಗಳನ್ನು ಪಂಚಾಯತಿಗೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಪಂಚಾಯತಿಯಲ್ಲಿ ಜೈ ಬೀಮ್ ನಗರದ ಚಂದ್ರಯ್ಯ ಮತ್ತು ಅಜೂರು ಗ್ರಾಮದ ರಾಮಯ್ಯ ರವರು ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪಂಚಾಯತಿಯಲ್ಲಿ ಕ್ರಯದ ಕರಾರು ರೀತ್ಯಾ ನಾನು ಹಣವನ್ನು ಮರುಪಾವತಿ ಮಾಡುತ್ತೇನೆ, ಜಮೀನನ್ನು ಬರೆದುಕೊಡುವುದಿಲ್ಲ ಎಂದು ನಾನು ಹೇಳಿದ್ದೆ ಎಂದರೆ ಸರಿಯಲ್ಲ. ಪಂಚಾಯತಿಯಲ್ಲಿ ವಿವಾದ ಬಗೆಹರಿಯದ ಕಾರಣ ಮಧ್ಯ ಕಾಲೀನ ಅರ್ಜಿಯ ಮೇಲೆ ವಾದ ಮಂಡನೆಯಾಗಿ ಮಧ್ಯ ಕಾಲೀನ ಅರ್ಜಿ ವಜಾ ಆಯಿತು ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯರು 19 ಗುಂಟೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ದಿಃ18-05-2018 ರಂದು ನಾನು ಮತ್ತು ನನ್ನ ಹೆಂಡತಿ 1 ನೇ ಪ್ರತಿವಾದಿಯ ಮೇಲೆ ಹಲ್ಲೆ ಮಾಡಿದ್ದೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಗೆ ಕಲ್ಲಿನಿಂದ ಬಾಯಿಗೆ ಮತ್ತು ಹಲ್ಲಿಗೆ ಹೊಡೆದಾಗ ಹಲ್ಲು ಉದುರಿತು ಎಂದರೆ ನನಗೆ ಗೊತ್ತಿಲ್ಲ. ನಂತರ 1 ನೇ ಪ್ರತಿವಾದಿ ಆಸ್ಪತ್ರೆಗೆ ದಾಖಲಾಗಿ ಅವರ ಹೇಳಿಕೆ ಆಧಾರದ ಮೇಲೆ ನನ್ನ ಮತ್ತು ನನ್ನ ಹೆಂಡತಿಯ ವಿರುದ್ಧ ಪ್ರಕರಣ ದಾಖಲಾಯಿತು ಎಂದರೆ ಸರಿ, ಸಾಕ್ಷಿಯು ಜಾಮೀನು ಪಡೆದುಕೊಂಡಿರುತ್ತೇನೆ ಮತ್ತು ನನ್ನ ಹೆಂಡತಿಗೂ ಗಾಯಗಳು ಆಗಿತ್ತು ಎಂದು ನುಡಿಯುತ್ತಾರೆ.

ನಾನು 1 ನೇ ಪ್ರತಿವಾದಿಗೆ ಕರಾರು ಪತ್ರದ ಬರೆದುಕೊಟ್ಟು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರಕ್ಕೆ ನನ್ನ ತಮ್ಮ ಬೊಮ್ಮಯ್ಯ ರವರು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಸಹಿ ಮಾಡಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕ್ರಯದ ಕರಾರು ಪತ್ರ ಬರೆದುಕೊಟ್ಟ ದಿನಾಂಕದಂದು 19 ಗುಂಟೆ ಜಮೀನನ್ನು 1 ನೇ ಪ್ರತಿವಾದಿಯ ಸ್ವಾಧೀನಕ್ಕೆ ಕೊಟ್ಟಿದ್ದೆವು ಎಂದರೆ ಸರಿಯಲ್ಲ. 19 ಗುಂಟೆ ಜಮೀನಿನಲ್ಲಿ ನೀಲಗಿರಿ ಮರಗಳು ಇದ್ದವು ಎಂದರೆ ಸರಿ. ಸದರಿ ನೀಲಗಿರಿ ಮರಗಳನ್ನು 1 ನೇ ಪ್ರತಿವಾದಿಯ ಗಂಡ ಬದುಕಿದ್ದಾಗ ಕಡಿದು ಮಾರಾಟ ಮಾಡಿದ್ದರು ಎಂರದೆ ಸಾಕ್ಷಿಯು ಬ್ರಾಹ್ಮಣರ ಜಮೀನಿನಲ್ಲಿ ಇದ್ದ ನೀಲಗಿರಿ ಮರಗಳನ್ನು ಕಡಿದು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮರಗಳು ಈಗ ಚಿಗುರುತ್ತಿವೆ ಎಂದರೆ ಸಾಕ್ಷಿಯು ಬ್ರಾಹ್ಮಣರ ಜಮೀನಿನಲ್ಲಿ ಇದ್ದು ಚಿಗುರುತ್ತಿವೆ ಎಂದು ನುಡಿಯುತ್ತಾರೆ.

ಈ ದಾವೆ ಹೂಡಿದ ನಂತರ ನಾನು 19 ಗುಂಟೆ ಜಮೀನಿಗೆ ಹಲವಾರು ಬಾರಿ ಪ್ರತಿವಾದಿಯರಿಗೆ ತಂಟೆ ತಕರಾರು ಮಾಡಿದ್ದೇನೆ ಎಂದರೆ ಸಾಕ್ಷಿಯು ಪ್ರತಿವಾದಿಯರು ತಂಟೆ ತಕರಾರು ಮಾಡಿದ್ದರಿಂದ ನಾನು ಈ ದಾವೆಯನ್ನು ಹೂಡಿದ್ದೇನೆ ಮತ್ತು ದಾವಾ ಆಸ್ತಿ ನಾನು ಖರೀದಿಸಿದ ಆಸ್ತಿ ಎಂದು ನುಡಿಯುತ್ತಾರೆ.

ನಾನು ಸಲ್ಲಿಸಿರುವ ದಾವೆಯ ವಾದ ಪತ್ರದ ಒಕ್ಕಣೆಗಳು ನನಗೆ ಗೊತ್ತಿಲ್ಲ. ನಾನು 1 ಎಕರೆ 17 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇಲ್ಲ, 19 ಗುಂಟೆ ಜಮೀನಿನ ಸ್ವಾಧೀನವನ್ನು ಹೊರತು ಪಡಿಸಿ ಉಳಿಕೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದೇನೆ ಎಂದರೆ ಸರಿಯಲ್ಲ. 19 ಗುಂಟೆ ಜಮೀನಿನ ಸ್ವಾಧೀನವನ್ನು ಪ್ರತಿವಾದಿಯರಿಂದ ಕಿತ್ತುಕೊಳ್ಳಲು ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸಾಕ್ಷಿಯು ಪ್ರತಿವಾದಿಯರು ತಂಟೆ ತಕರಾರು ಮಾಡುತ್ತಿದ್ದರಿಂದ ಈ ದಾವೆಯನ್ನು ಹೂಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ 19 ಗುಂಟೆ ಜಮೀನಿನಲ್ಲಿ 1 ನೇ ಪ್ರತಿವಾದಿ ಹಲಸಿನ ಮರ, ತೇಗದ ಮರ, ಹುಳಿ ಮರ ಗಳನ್ನು ನೆಟ್ಟಿದ್ದಾರೆ ಎಂದರೆ ಸಾಕ್ಷಿಯು ಸದರಿ ಮರಗಳು ನನ್ನ ಜಮೀನಿನಲ್ಲಿರುವ ಮರಗಳು ಎಂದು ನುಡಿಯುತ್ತಾರೆ.

19 ಗುಂಟೆ ಜಮೀನಿನಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದು ಜಮೀನಿನ ಆಜುಬಾಜುದಾರರು ಸಾಕ್ಷ್ಯ ನುಡಿಯುತ್ತಾರೆ. ದಾವಾ ಸರ್ವೆ ನಂಬರ್ ನಲ್ಲಿ 19 ಗುಂಟೆ ಜಮೀನನ್ನು ದಿಃ29-05-1995 ರಂದು ಮಾರಾಟ ಮಾಡುತ್ತೇವೆ ಎಂದು 1 ನೇ ಪ್ರತಿವಾದಿಯಿಂದ ಮೂರು ಸಾವಿರ ಹಣವನ್ನು ಪಡೆದು ಕ್ರಯದ ಕ್ರರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಿಃ29-05-1995 ರಂದು ನಾನು 1 ನೇ ಪ್ರತಿವಾದಿಗೆ 19 ಗುಂಟೆ ಜಮೀನಿನ ಸ್ವಾಧೀನವನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಕ್ರಯದ ಕರಾರು ಪತ್ರದ ರೀತ್ಯಾ ನಾನು ಹಣ ಪಡೆದು ನಾನು ಮತ್ತು ನನ್ನ ತಮ್ಮ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅಜ್ಜೂರು ಗ್ರಾಮದ ರಾಮಯ್ಯ ನನಗೆ ಪರಿಚಯ. ತಹಶೀಲ್ದಾರ್ ಕಚೇರಿಯ ಮುಂಭಾಗ ಅರ್ಜಿಯನ್ನು ಬರೆಯುವ ರಾಮಯ್ಯ ನನಗೆ 2-3 ವರ್ಷಗಳಿಂದ ನನಗೆ

ಪರಿಚಯ. ಸದರಿ ರಾಮಯ್ಯ ರವರ ತಂದೆ ತೀರಿಹೋಗಿದ್ದಾರೆ ಎಂದರೆ ನಾನು ಅವರನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ರಾಮಯ್ಯನವರ ತಂದೆ ಸ್ಟಾಂಪ್ ವೆಂಡರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಕೋಡಿ ಬೊಮ್ಮನ ಮಗ ಗಾರೆ ಕೃಷ್ಣ ರವರು ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹಾ ನಾನು 19 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನನ್ನ ವಕೀಲರು ಬರೆದುಕೊಂಡಿರುತ್ತಾರೆ. ಸದರಿ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ದಾವೆ ತೀರ್ಮಾನವಾದ ನಂತರ ಹೇಳುತ್ತೇನೆ ಎಂದು ಹೇಳಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಮತ್ತು ನನ್ನ ತಮ್ಮ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದರೂ ಸಹಾ ನಾನು ಸುಳ್ಳು ಹೇಳುತಿಲ್ತದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು